ಸರ್ಕಾರಕ್ಕಿಲ್ಲ.

ಒಬ್ಬ ಸದಸ್ಯರು:- ಈ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ವಿರೋಧ ಪಕ್ಷದವರು ಈಗಾಗಲೇ ಹೇಳುತ್ತಿದ್ದಾರೆ ಜನರ ಮೇಲೆ ಇವರಿಗೆ ವಿಶ್ವಾಸ ಇಲ್ಲ. ನೀವು ಏನು ವಿಕೇಂದ್ರೀಕರಣ ಮಾಡಿದ್ದೀರಿ ಅವರೇ ಮಾಡಬೇಕು, ಸರ್ಕಾರ ಏಕೆ ಮಾಡಬೇಕು ಎಂಬ ಕೂಗು ಕೇಳಿ ಕೇಳಿ ಸಾಕಾಗಿದೆ. ಅದಕ್ಕೆ ನಾವು ಜಿಲ್ಲಾಪರಿಷತ್ತಿನವರೇ ಇಟ್ಟುಕೊಳ್ಳಲಿ ಎಂದು ಮಾಡಿದ್ದೇವೆ. ೩ ವರ್ಷವಾದ ಮೇಲೆ ಅವರನ್ನು ತೆಗೆದು ಹೊಸ ಸದಸ್ಯರಿಗೆ ಅನುಕೂಲ ಮಾಡಿಕೊಡಲಿ. ಕಂಟಿನ್ಯೂ ಇದ್ದರೆ ಸಾಯುವವರೆಗೆ ಅವರೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ಮಹದೇವ್:- ಜಿಲ್ಲಾ ಪರಿಷತ್ತಿಗೆ ನೀವು ಅಧಿಕಾರ ಕೊಟ್ಟಿದ್ದೀರಿ, ಹಣ ಕೊಟ್ಟಿದ್ದೀರಿ, ಎಲ್ಲವನ್ನೂ ಕೊಟ್ಟಿದ್ದೀರಿ. ಆದರೆ ನಾಮಿನೇಶನ್ ಏನಿದೆ ಅದನ್ನು ಸರ್ಕಾರದಲ್ಲೇ ಇಟ್ಟುಕೊಂಡರೆ ಒಳ್ಳೆಯದು. ಅದನ್ನೂ ಜಿಲ್ಲಾಪರಿಷತ್‌ಗೇ ಕೊಟ್ಟು ಬಿಟ್ಟರೆ ನ್ಯಾಯ ದೊರೆಯುವುದಿಲ್ಲ. ಅದನ್ನು ರಾಜಕೀಯವಾಗಿ ವಿಚಾರ ಮಾಡುತ್ತಾರೆ. ಈ ಅಧಿಕಾರ ಸರ್ಕಾರದಲ್ಲೇ ಇತ್ತು ಅಂದರೆ ಕಾನೂನಿನ ಚೌಕಟ್ಟಿನಲ್ಲಿ ಮಾಡುತ್ತೀರಿ. ಆಗ ನ್ಯಾಯ ದೊರೆಯುತ್ತದೆ ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಉಳಿದಿರುವುದನ್ನು ನೀವು ಇಟ್ಟುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾಲ್ಲೂಕು ಪಂಚಾಯಿತಿಯಲ್ಲಿ ನಿರ್ಣಯ ಪಾಸ್ ಮಾಡಿ ಅವರ ಹೆಸರು ರೆಕಮೆಂಡ್ ಮಾಡುತ್ತಾರೆ. ಜಿಲ್ಲಾ ಪರಿಷತ್ ಅದನ್ನು ಅಪ್ರೂವ್ ಮಾಡಿ ಕಳುಹಿಸುತ್ತಾರೆ. ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಛೇರ್ಮನ್ ಏನಿದ್ದೀರಿ, ನಿಮ್ಮ ಅಧ್ಯಕ್ಷತೆಯಲ್ಲೇ ನಿರ್ಣಯ ಮಾಡಿ ಕೋ-ಆಪ್ಟ್ ಮೆಂಬರಾಗಿ ಇವರನ್ನು ತೆಗೆದುಕೊಳ್ಳಬೇಕು ಎಂದು ಕಳಿಹಿಸಿದಾಗ ಮಾತ್ರ ಆ ಸದಸ್ಯರು ಬರುತ್ತಾರೆ ಇಲ್ಲದಿದ್ದರೆ ಬೇರೆಯವರು ಬರುವ ಪ್ರಶ್ನೆ ಇಲ್ಲ. ಅದಕ್ಕೇ ಇದು ಎಲ್ಲರ ಕನ್‌ಸೆಸನ್‌ನಿಂದ ಎಲ್ಲರ ಸಮ್ಮುಖದಲ್ಲಾಗಲಿ, ಯಾವ ಕಮ್ಯುನಿಟಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಅಂಥಹವರನ್ನೂ ಕೋ-ಆಪ್ಟ್ ಮಾಡಿಕೊಳ್ಳುವ ಅವಶ್ಯಕತೆ ಸಿಗಬೇಕೆಂದು ನಾವು ಸಣ್ಣ ತಿದ್ದುಪಡಿ ತಂದಿದ್ದೇವೆ. ಅದಕ್ಕೆ ತಾವೆಲ್ಲರೂ ಬೆಂಬಲ ಸೂಚಿಸಿದ್ದೀರಿ. ಇದನ್ನು ಸರ್ವಾನುಮತದಿಂದ ಪಾಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಭಾಧ್ಯಕ್ಷಣೆಯವರು:- ಪ್ರಸ್ತಾವ ಏನೆಂದರೆ:

೧೯೯೨ರ ಕರ್ನಾಟಕ ಜಿಲ್ಲಾಪರಿಷತ್‌ಗಳು, ತಾಲ್ಲೂಕು ಮಂಡಲಿಯ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯವನ್ನು ಪರ್ಯಾಲೋಚಿಸುವುದು.

ಖಂಡ ೨ ಮತ್ತು ೩.

ಉಪಾಧ್ಯಕ್ಷಣೆಯವರು:- ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಖಂಡ ೪, ೫ ಮತ್ತು ೬ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

Clauses 4, 5, 6 and 7

The Clauses 4, 5 and 6 of the Bill shall be renumbered as Clauses 5, 6 and 7 thereof respectively and before these Clauses are so renumbered the following clause shall be inserted, namely:-

4. Amendment of Section 135: In Section 135 of the Principal Act, after sub-section (2), the following sub-section shall be deemed always to have been inserted, namely:-

(2A) Subject to the pleasure of Zilla Parishads, the term of office of the members co-opted under Clause (f) of sub-section (2), shall be for three years from the date of publication of their names in the official Gazette**. ಸೆಕ್ಷನ್ ೧೫ಕ್ಕೆ ತಂದಿರತಕ್ಕ ತಿದ್ದುಪಡಿಯನ್ನು ಈಗಾಗಲೇ ಎಕ್ಸ್‌ಪ್ಲೈನ್ ಮಾಡಿದ್ದೇನೆ. ಕೋ-ಆಪ್ಟ್ ಮೆಂಬರ್ಸ್‌ಗೆ ಮೂರು ವರ್ಷ ಎಂದು ಟರ್ಮ್ ಫಿಕ್ಸ್ ಮಾಡಿದ್ದೇವೆ. ಮೊದಲು ಅವರ ಟರ್ಮ್ ಫಿಕ್ಸ್ ಇರಲಿಲ್ಲ. ಎಲ್ಲಿಯವರೆಗೆ ತಾಲ್ಲೂಕು ಪಂಚಾಯಿತಿ ಸಮಿತಿ ಇರುತ್ತದೋ ಅಲ್ಲಿಯವರೆಗೂ ಅವರು ಸದಸ್ಯರಾಗಿರಬಹುದಾಗಿತ್ತು. ಅದಕ್ಕಾಗಿ ಇವತ್ತು ನಾವುಗಳು ಮೂರು ವರ್ಷ ಎಂದು ಒಂದು ಟರ್ಮ್‌ನ್ನು ಫಿಕ್ಸ್ ಮಾಡಿದ್ದೇನೆ. ಈಗಾಗಲೇ ನಾನು ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ಉಪಾಧ್ಯಕ್ಷರೆಯವರು:- ಪ್ರಸ್ತಾವ ಏನೆಂದರೆ

CLAUSES 4, 5, 6 AND 7

The Clauses 4, 5, 6 and 7 of the Bill shall be renumbered as Clauses 5, 6 and 7 thereof respectively and before these clauses are so renumbered the following clause shall be inserted, namely:-

4. Amendment of Section 135: In Section 135 of the Principal Act, after sub-section (2), the following sub-section shall be and shall be deemed always to have ben instead namely:-

(2A) subject to the pleasure of Zilla Parishads, the term of

office of the members co-opted under Clause (f) of sub-section (2), shall be for three years from the date of publication of their names in the official Gazette."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಉಪಾಧ್ಯಕ್ಷರು:- ಖಂಡ ೪ ತಿದ್ದುಪಡಿಯಾದಂತೆ, ಹಾಗೂ ೫, ೬ ಖಂಡಗಳು, ೫, ೬, ೭ನೇ ಖಂಡಗಳಿಂದ ತಿದ್ದುಪಡಿಯೊಂದಿಗೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೪ ತಿದ್ದುಪಡಿಯಾದಂತೆ, ೫, ೬, ಖಂಡಗಳು, ೫, ೬, ೭ನೆಯ ಖಂಡಗಳಿಂದ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ ೧ ಇತ್ಯಾದಿ:-

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''ಮೊದಲನೆ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಯ (ಅಮೆಂಡ್‌ಮೆಂಟ್) ಬಿಲ್ ೧೯೯೨ರ ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ: ''೧೯೯೨ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಸೋಮವಾರ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ೧೧ಗಂಟೆ ೪೮ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೩ನೇ ಮಾರ್ಚಿ ೧೯೯೨ರ ಸೋಮವಾರದಂದು ಬೆಳಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)